## ತಪ್ಪುವುದೇ ಚೋಕರ್ಸ್ ಪಟ್ಟ?

ಹಲವು ಬಾರಿ ಪ್ರಶಸ್ತಿ ಸನಿಹ ಬಂದೂ ಅದನ್ನು ಎತ್ತಿ ಹಿಡಿಯಲಾಗದ ನತದೃಷ್ಟ ದಕ್ಷಿಣ ಆಫ್ರಿಕಾ ತಂಡಕ್ಕೆ ಈ ಬಾರಿಯಾದರೂ ಚೋಕರ್ಸ್ ಪಟ್ಟ ತಪ್ಪುವುದೇ ಎನ್ನುವುದೇ ಕ್ರಿಕೆಟ್ ಲೋಕದ ಪ್ರಮುಖ ಚರ್ಚೆಗಳಲ್ಲೊಂದು.

ತಂಡ ಟ್ರೋಫಿ ಗೆಲ್ಲಲಾಗದಷ್ಟು ದುರ್ಬಲವಾಗಿದ್ದರೆ ಲೀಗ್ ಹಂತದಲ್ಲಿ ಸೋತು ನಿರ್ಗಮಿಸಬಹುದು. ಕೆಲ ಬಾರಿ ನಾಕೌಟ್ ಪ್ರವೇಶಿಸಿ ಸೋಲಬಹುದು. ಆದರೆ ದಕ್ಷಿಣ ಆಫ್ರಿಕಾ ತಂಡ ಏಕದಿನ ವಿಶ್ವಕಪ್‌ನಲ್ಲಿ ಒಟ್ಟು ಎಂಟು ಬಾರಿ ಸ್ಪರ್ಧಿಸಿ, ನಾಲ್ಕು ಬಾರಿ ಸೆಮಿಫೈನಲ್ ಹಾಗೂ ಎರಡು ಸಲ ಕ್ವಾರ್ಟರ್ ಫೈನಲ್‌ನಲ್ಲಿ ಸೋಲು ಕಂಡು 'ಚೋಕರ್ಸ್' ಪಟ್ಟ ಕಟ್ಟಿಕೊಂಡಿದೆ. ಹೀಗಾಗಿ ಹರಿಣಗಳ ನಾಡಿಗೆ ವಿಶ್ವಕಪ್ ಈವರೆಗೆ ಗಗನಕುಸುಮವಾಗಿದೆ.





'ಏಷ್ಯಾ ಕಪ್ 2023' ಟ್ರೋಫಿ ಹಿಡಿದ ಮ್ಯಾಚ್ ವಿನ್ನರ್ ಸಿರಾಜ್

ಬಹುಮಾನ ಲಭಿಸಿತ್ತು. ಅದಾದ ಎರಡು ವಿಶ್ವಕಪ್‌ಗಳ ಬಳಿಕ ಬಹುಮಾನ ಮೊತ್ತದಲ್ಲಿ ಮತ್ತೆ ಭಾರೀ ಏರಿಕೆಯಾಗಿದೆ.

2019ರಲ್ಲಿ ಕೊನೆಯ ಬಾರಿಗೆ ನಡೆದ ಟೂರ್ನಿಯಲ್ಲಿ ಚಾಂಪಿಯನ್ ತಂಡಕ್ಕೆ ₹27.88 ಕೋಟಿ ಬಹುಮಾನ ಮೊತ್ತ ಲಭಿಸಿತ್ತು. ಈ ಬಾರಿ ತಂಡಗಳಿಗೆ ನೀಡುವ ನಗದು ಒಟ್ಟು ₹82.9 ಕೋಟಿ. ಪ್ರಶಸ್ತಿ ಗೆಲ್ಲುವ ತಂಡಕ್ಕೆ ₹33.16 ಕೋಟಿ, ರನ್ನರ್ಸ್ ಅಪ್ ತಂಡಕ್ಕೆ ₹16.58 ಕೋಟಿ ಸಿಗುತ್ತದೆ.

## 'ಲಿಲ್ಲಿಪುಟ್' ರಾಷ್ಟ್ರಗಳ ಯಶಸ್ಸಿನ ಹೆಜ್ಜೆ

ವಿಶ್ವಕಪ್‌ನಲ್ಲಿ 10ಕ್ಕಿಂತಲೂ ಹೆಚ್ಚು ತಂಡಗಳು ಪಾಲ್ಗೊಂಡಾಗ ಕ್ರಿಕೆಟ್ ಲೋಕದ ಹೊಸ ತಂಡಗಳಿಗೆ ಹೆಚ್ಚು ಅವಕಾಶಗಳು ಲಭಿಸಿದ್ದವು. 2007ರಲ್ಲಿ ವೆಸ್ಟ್ ಇಂಡೀಸ್‌ನಲ್ಲಿ ಟೂರ್ನಿ ನಡೆದಾಗ 16 ತಂಡಗಳು, 2011 ಮತ್ತು 2015ರ ಟೂರ್ನಿಗಳಲ್ಲಿ 14 ತಂಡಗಳು ಪಾಲ್ಗೊಂಡಿದ್ದವು.

ಈ ಬಾರಿ ಐಸಿಸಿ ಹತ್ತು ತಂಡಗಳಿಗೆ ಮಾತ್ರ ಅವಕಾಶ ನೀಡಿದ್ದರಿಂದ ಒಂದು ಬಾರಿ ವಿಶ್ವಕಪ್ ಗೆದ್ದಿರುವ ಶ್ರೀಲಂಕಾಕ್ಕೆ ಅರ್ಹತಾ ಸುತ್ತಿನಲ್ಲಿ ಉತ್ತಮ ಪ್ರದರ್ಶನ ನೀಡಿದ ಬಳಿಕವಷ್ಟೇ ಟೂರ್ನಿಯಲ್ಲಿ ಅವಕಾಶ ಲಭಿಸಿದೆ. ವಿಶ್ವಕಪ್‌ನ ಮೊದಲ ಎರಡು ಟೂರ್ನಿಗಳಲ್ಲಿ ಚಾಂಪಿಯನ್ ಆಗಿದ್ದ ಮತ್ತು ನಾಲ್ಕು ಬಾರಿ ನಾಕೌಟ್ ಹಂತ ಪ್ರವೇಶಿಸಿದ್ದ ಬಲಿಷ್ಠ ವಿಂಡೀಸ್ ತಂಡಕ್ಕೆ ಈ ಬಾರಿ ಅರ್ಹತಾ ಸುತ್ತು ದಾಟಿ ಬರಲು ಸಾಧ್ಯವಾಗಿಲ್ಲ.

ವಿಂಡೀಸ್ ತಂಡದ ಪ್ರಬಲ ಸವಾಲು ಎದುರಿಸಿ ಅನನುಭವಿ ಅಫ್ಘಾನಿಸ್ತಾನ ಮತ್ತು ನೆದರ್ಲೆಂಡ್ಸ್ ತಂಡಗಳು ಅರ್ಹತೆ ಗಿಟ್ಟಿಸಿರುವುದು ಕುತೂಹಲಕರ. ಅಫಘಾನಿಸ್ತಾನ ತಂಡಕ್ಕೆ ಇದು ಮೂರನೇ ವಿಶ್ವಕಪ್. ಹಿಂದಿನ ಎರಡೂ ಟೂರ್ನಿಗಳಲ್ಲಿ ಆಡಿರುವ ಈ ತಂಡ ಗುಂಪು ಹಂತದಲ್ಲಿ ನಿರ್ಗಮಿಸಿತ್ತು. ನೆದರ್ಲೆಂಡ್ಸ್ 1996ರಲ್ಲಿ ಮೊದಲ ಬಾರಿಗೆ ಆಡಿ ಬಳಿಕ ಅರ್ಹತೆ ಪಡೆಯಲು ವಿಫಲವಾಗಿತ್ತು. ನಂತರ 2003ರಿಂದ 2011ರ ಅವಧಿಯಲ್ಲಿ ಮೂರು ಬಾರಿ ಆಡಿ ಗುಂಪು ಹಂತದಲ್ಲಿ ಸೋತಿತ್ತು. ಮತ್ತೆ ಈಗ ಅವಕಾಶ ಪಡೆದುಕೊಂಡಿದೆ.

ಭಾರತ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಇಂಗ್ಲೆಂಡ್ ಹಾಗೂ ದಕ್ಷಿಣ ಆಫ್ರಿಕಾದಂಥ ತಂಡಗಳಿಗೆ ಕಠಿಣ ಪೈಪೋಟಿ ಒಡ್ಡಬಲ್ಲ ಸಾಮರ್ಥ್ಯ ಹೊಂದಿರುವ ಬಾಂಗ್ಲಾದೇಶದ ಪಾಲಿಗೆ ಇದು ಸತತ ಏಳನೇ ವಿಶ್ವಕಪ್.

ಅರ್ಹತಾ ಹಂತದ ಟೂರ್ನಿಗಳಲ್ಲಿ ಐರ್ಲೆಂಡ್, ನೇಪಾಳ, ಓಮಾನ್, ಸ್ಕಾಟ್ಲೆಂಡ್, ಯುನೈಟೆಡ್ ಅರಬ್ ಎಮಿರೇಟ್ಸ್, ಯುಎಸ್ಎ ಹೀಗೆ ಹೊಸ 'ಲಿಲ್ಲಿಪುಟ್' ರಾಷ್ಟ್ರಗಳು ಕ್ರಿಕೆಟ್‌ನ ಪ್ರತಿಷ್ಠಿತ ಟೂರ್ನಿಗೆ ಅರ್ಹತೆ ಪಡೆದುಕೊಳ್ಳಲು ಪ್ರತಿ ಸಲವೂ ಹೋರಾಟ ನಡೆಸುತ್ತಿವೆ. ಇದು ಕ್ರಿಕೆಟ್‌ನ ವಿಸ್ತಾರ ಹೆಚ್ಚಾಗಲು ಉತ್ತಮ ವೇದಿಕೆಯೂ ಹೌದು. 2027ರಲ್ಲಿ ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಮತ್ತು ನಮೀಬಿಯಾ ದೇಶಗಳ ಆತಿಥ್ಯದಲ್ಲಿ ವಿಶ್ವಕಪ್ ಆಯೋಜನೆಯಾಗಿದೆ. ಆತಿಥ್ಯ ವಹಿಸುವ ರಾಷ್ಟ್ರಗಳೆನ್ನುವ ಕಾರಣಕ್ಕೆ ಈ ತಂಡಗಳಿಗೆ ನೇರವಾಗಿ ಟೂರ್ನಿಯಲ್ಲಿ ಪಾಲ್ಗೊಳ್ಳಲು ಅವಕಾಶ ಸಿಗುವ ಕಾರಣ, ಪಾಲ್ಗೊಳ್ಳುವ ಒಟ್ಟು ತಂಡಗಳ ಸಂಖ್ಯೆಯನ್ನು 14ಕ್ಕೆ ಏರಿಸಲಾಗಿದೆ.

ಹಲವು ವರ್ಷಗಳಿಂದ ಕೆಲವು ರಾಷ್ಟ್ರಗಳಷ್ಟೇ ಪ್ರಾಬಲ್ಯ ಮೆರೆಯುತ್ತಿರುವ ಕ್ರಿಕೆಟ್ ಇನ್ನಷ್ಟು ದೇಶಗಳಿಗೆ ವಿಸ್ತಾರಗೊಳ್ಳಬೇಕಾದರೆ ಪ್ರತಿ ಸಲವೂ ಹೊಸ ತಂಡಗಳಿಗೆ ಅವಕಾಶ ಲಭಿಸಬೇಕಿದೆ. ಇದಕ್ಕಾಗಿ ಪ್ರತ್ಯೇಕ ಮಾದರಿಯನ್ನು ರೂಪಿಸಿ ಕ್ರಿಕೆಟ್ ಬಲವರ್ಧನೆಗೆ ಕ್ರಮ ಕೈಗೊಳ್ಳುವ ಹೊಣೆಗಾರಿಕೆ ಐಸಿಸಿ ಮೇಲಿದೆ.

ನವೆಂಬರ್ 19ರಂದು ವಿಶ್ವಕಪ್ ಟೂರ್ನಿಯ ಫೈನಲ್. ಹೊಸ ಚಾಂಪಿಯನ್ ತಂಡ ಉದಯಿಸುವ ಸಮಯ. ಚಾಂಪಿಯನ್ ಪಟ್ಟದಲ್ಲಿ ಭಾರತ ಇರಲಿದೆಯೇ ಎನ್ನುವುದು ಈಗ ಕ್ರಿಕೆಟ್‌ಪ್ರಿಯರ ಮುಂದಿರುವ ಪ್ರಶ್ನೆ; ಭಾರತವೇ ಇರಲಿ ಎನ್ನುವುದು ಹಾರೈಕೆ.

ಪ್ರತಿಕ್ರಿಯಿಸಿ: feedback@sudha.co.in